ಓ.ಎಸ್. ನಂಃ 164/2018

**ಡಿ.ಡಬ್ಲ್ಯೂಃ 1**

**ದಿನಾಂಕ 03.09.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿಯ ಪರ ಃ ಶ್ರೀ.ಎಲ್.ವಿ.ಆರ್ . ವಕೀಲರಿಂದಃ**

1. ಸರ್ವೇ ನಂಬರ್ 582/2 ರ 2 ಎಕರೆ 8 ಗುಂಟೆ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸರ್ವೇ ನಂಬರ್ 582/2 ರ 2 ಎಕರೆ 8 ಗುಂಟೆ ಜಮೀನಿನ ಪೈಕಿ 1 ಎಕರೆ 22 ಗುಂಟೆ ಜಮೀನು ಜನತಾ ಸೈಟು ನಿರ್ಮಾಣ ಮಾಡಲು ಭೂ-ಸ್ವಾಧೀನವಾಗಿರುತ್ತದೆ ಎಂದರೆ ಸರಿ. ಭೂ-ಸ್ವಾಧೀನವಾದ ಸದರಿ 1 ಎಕರೆ 22 ಗುಂಟೆ ಜಮೀನನ್ನು ಹೊರತುಪಡಿಸಿ ಸರ್ವೇ ನಂಬರ್ 582/2 ರಲ್ಲಿ 26 ಗುಂಟೆ ಜಮೀನು ಉಳಿದಿರುತ್ತದೆ ಎಂದರೆ ಸರಿ.

2. ನನ್ನ ತಂದೆಯಾದ ಸಂಪತ್ ಕುಮಾರ್ ಹಾಗೂ ಈ ದಾವೆಯ ವಾದಿಯು ಖಾಸಾ ಅಣ್ಣ-ತಮ್ಮಂದಿರು ಎಂದರೆ ಸರಿ. ಸರ್ವೇ ನಂಬರ್ 582/2 ರ ಉಳಿದ 26 ಗುಂಟೆ ಜಮೀನು ನಮ್ಮ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ಸರ್ವೇ ನಂಬರ್ 582/2 ರ ಸದರಿ 26 ಗುಂಟೆ ಜಮೀನನ್ನು ನನ್ನ ತಂದೆಯಾದ ಸಂಪತ್ ಕುಮಾರ್ ಹಾಗೂ ಈ ದಾವೆಯ ವಾದಿಯು ಸಮಾನಾಗಿ ತಲಾ 13-13 ಗುಂಟೆಗಳಂತೆ ಮೌಖಿಕವಾಗಿ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ವಾದಿ ಮತ್ತು ನನ್ನ ತಂದೆಯ ಹಿಸ್ಸೆಗೆ ಬಂದಿದ್ದ ಸದರಿ ತಲಾ 13 ಗುಂಟೆ ಜಮೀನನ್ನು ತಮ್ಮ ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡು ತಮ್ಮ ತಮ್ಮ ಹಿಸ್ಸೆಗೆ ಬಂದಿದ್ದ ಆಸ್ತಿಗಳ ಸ್ವಾಧೀನದಲ್ಲಿ ಪ್ರತ್ಯೇಕವಾಗಿ ಇದ್ದರು ಎಂದರೆ ಸರಿ.

3. ನನ್ನ ತಂದೆಯವರ ಹಿಸ್ಸೆಗೆ ಬಂದಿದ್ದ ಸರ್ವೇ ನಂಬರ್ 582/2 ರ 13 ಗುಂಟೆ ಜಮೀನಿನ ಚೆಕ್ಕುಬಂಧಿ ಪೂರ್ವಕ್ಕೆ-ಜನತಾ ನಿವೇಶನ ಎಂದರೆ ಸಾಕ್ಷಿಯು ನನ್ನ ತಂದೆಯವರ ಹಿಸ್ಸೆಗೆ ಬಂದಿದ್ದ 13 ಗುಂಟೆ ಜಮೀನಿನ 2 ದಿಕ್ಕುಗಳಲ್ಲಿ ಜನತಾ ಸೈಟುಗಳು ಇದ್ದು, ಇನ್ನೊಂದು ದಿಕ್ಕಿಗೆ ಗೋಪಾಲ ರವರ ಜಮೀನು ಮತ್ತು ಮತ್ತೊಂದು ದಿಕ್ಕಿಗೆ ಮಂಜುನಾಥರವರ ಜಮೀನು ಇದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ನಿಮ್ಮ ಸದರಿ 13 ಗುಂಟೆ ಜಮೀನಿನ ಪಶ್ಚಿಮ ದಿಕ್ಕಿಗೆ ದಾವಾ ಆಸ್ತಿ ಇದೆ

ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

4. ನನಗೆ ದಿಕ್ಕುಗಳ ಹೆಸರು ಸರಿಯಾಗಿ ಗೊತ್ತಿಲ್ಲ. ದಾವಾ ಆಸ್ತಿಯ ಪೂರ್ವ ದಿಕ್ಕಿಗೆ ನಮಗೆ ಸೇರಿದ ಸರ್ವೆ ನಂಬರ್ 582/2 ರ 13 ಗುಂಟೆ ಜಮೀನು ಇದೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮಕ್ಕೆ -ಮಂಜುನಾಥರವರ ಆಸ್ತಿ ಇದೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಉತ್ತರ ದಿಕ್ಕಿಗೆ-ರಸ್ತೆ ಇದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯ ದಕ್ಷಿಣ ದಿಕ್ಕಿಗೆ-ಮಾದೇಗೌಡರ ಜಮೀನು ಇದೆ ಎಂದರೆ ಸರಿಯಲ್ಲ.

5. ವಾದಿ ಯಾವ ಪರಿಹಾರ ಕೋರಿ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಯಾವುದೇ ದಿಕ್ಕಿನಲ್ಲಿಯು ಸಹ ಜನತಾ ಸೈಟುಗಳು ಇರುವುದಿಲ್ಲ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**